ಕರ್ನಾಟಕ ರಾಜ್ಯದ ಕೊಳಚೆ ಪ್ರದೇಶಗಳಿಗೆ ಮೀಸಲಿಟ್ಟ ಹಣ

613 - ಶ್ರೀ ಕೆ.ಎಸ್. ಈಶ್ವರಪ್ಪ, (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಇರುವ ಅಧಿಕೃತ ಕೊಳಚೆ ಪ್ರದೇಶಗಳ ಸಂಖ್ಯೆ : ಎಷ್ಟು?*

ಆ) *1996-97ಕ್ಕೆ ಎಷ್ಟು ಕೊಳಚೆ ಪ್ರದೇಶಗಳನ್ನು ಅಧಿಕೃತಗೊಳಿಸಲಾಗಿದೆ?*

ಇ) *1997-98ನೇ ಸಾಲಿನಲ್ಲಿ ಇಟ್ಟ ಹಣ ಎಷ್ಟು? ಖರ್ಚಾದ ಹಣ ಎಷ್ಟು? ಹೆಚ್ಚು ಹಣ ಒದಗಿಸಲು ಸರ್ಕಾರದ ಯೋಜನೆ ಇದೆಯೇ?*

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ರಾಜ್ಯದಲ್ಲಿ ಈವರೆಗೆ ಗುರುತಿಸಲಾದ ಒಟ್ಟು 1871 ಕೊಳಚೆ ಪ್ರದೇಶಗಳ ಪೈಕಿ 1263 ಕೊಳಚೆ ಪ್ರದೇಶಗಳನ್ನು ಅಧಿಕೃತವಾಗಿ ಕಾಯಿದೆ ಅಡಿಯಲ್ಲಿ ಘೋಷಿಸಿದೆ.

ಆ) 1996-97ನೇ ಸಾಲಿನಲ್ಲಿ 24 ಕೊಳಚೆ ಪ್ರದೇಶಗಳನ್ನು ಕಾಯಿದೆಯಡಿಯಲ್ಲಿ ಘೋಷಿಸಿ ಅಧಿಕೃತಗೊಳಿಸಲಾಗಿದೆ.

ಇ) 1997-98ನೇ ಸಾಲಿನಲ್ಲಿ ಮಂಡಳಿಗೆ ಆಯವ್ಯಯದಲ್ಲಿ 1800.00 ಲಕ್ಷ ರೂ. ಗಳನ್ನು ಯೋಜನಾ ಬಾಬ್ತು ಹಾಗೂ 137.50 ಲಕ್ಷ ರೂ.ಗಳನ್ನು ಯೋಜನೇತರ ಬಾಬ್ತಿನಡಿಯಲ್ಲಿ ಒಟ್ಟು 1937.50 ಲಕ್ಷ ರೂ.ಗಳನ್ನು ನಿಗಧಿಪಡಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಫೆಬ್ರವರಿ 98ರ ಅಂತ್ಯದವರೆಗೆ 1094.42 ಲಕ್ಷ ರೂ.ಗಳನ್ನು ಯೋಜನಾ ಬಾಬ್ತಿನಡಿಯಲ್ಲಿ ಹಾಗೂ ಯೋಜನೇತರ ಬಾಬ್ತಿನಡಿಯಲ್ಲಿ 126.00 ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. 1997-98ನೇ ಸಾಲಿಗೆ ಹೆಚ್ಚು ಹಣ ಒದಗಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಹಣ ಬಿಡುಗಡೆ

614 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಆಯವ್ಯಯದಲ್ಲಿ ಶೇಕಡಾವಾರು ಮೀಸಲು ಇಡಬೇಕಾದ ಹಣವೆಷ್ಟು?*

ಆ) *ಸದರೀ ಮಂಡಳಿಗೆ1995-96, 1996-97ಕ್ಕೆ ರಾಜ್ಯ ಸರ್ಕಾರದ ಮೀಸಲು ಇಟ್ಟ ಹಣ, ಬಿಡುಗಡೆ ಮಾಡಿದ ಹಣ ಹಾಗೂ ಖರ್ಚು ಮಾಡಿದ ಹಣ ಎಷ್ಟು (ವಿವರ ನೀಡುವುದು)?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ರಾಜ್ಯ ಮತ್ತು ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಶೇಕಡಾವಾರು ಮೀಸಲು ಇಡಬೇಕಾದ ವ್ಯವಸ್ಥೆ ಇದುವರೆವಿಗೂ ಚಾಲ್ತಿಯಲ್ಲಿರುವುದಿಲ್ಲ. ಕೇಂದ್ರ ಸರ್ಕಾರ ಪ್ರಥಮ ಬಾರಿಗೆ 1996-97ನೇ ಸಾಲಿನಿಂದ ರೂ. 12.64 ಕೋಟಿಗಳ ಹಣವನ್ನು ನೀಡಿದ್ದಾರೆ. ಅಷ್ಟೇ ಮೊತ್ತದ ಹಣವನ್ನು 97-98ನೇ ಸಾಲಿಗೆ ನಿರೀಕ್ಷಿಸಲಾಗಿದೆ. ರಾಜ್ಯ ಸರ್ಕಾರ 1997-98ರಲ್ಲಿ ರೂ. 18.00 ಕೋಟಿ ಹಣ ನೀಡಿದೆ. 1998-99 ಕ್ಕೆ ಅಂದಾಜು ರೂ. 17.00 ಕೋಟಿ ಹಣವನ್ನು ನಿರೀಕ್ಷಿಸಲಾಗಿದೆ.

ಆ) ಮಂಡಳಿಗೆ 1995-96 ಮತ್ತು 96-97ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ನಿಗಧಿಪಡಿಸಿದ ಬಿಡುಗಡೆ ಮಾಡಿದ ಮತ್ತು ಖರ್ಚು ಮಾಡಿದ ಹಣದ ವಿವರಗಳನ್ನು ಕೆಳಗೆ ಒದಗಿಸಿದೆ. ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

(ಲಕ್ಷ ರೂ.ಗಳಲ್ಲಿ)

ಕ್ರಮ. ಸಂ.	ವರ್ಷ	ನಿಗಧಿಪಡಿಸಿದ ಹಣ	ಬಿಡುಗಡೆ ಗೊಳಿಸಿದ ಹಣ	ಖರ್ಚು ಮಾಡಿದ ಹಣ
1.	1995-96	759.00	709.00	709.00
2.	1996-97	1000.00	1000.00	1000.00

ಅನುಬಂಧ

ಮಂಡಳಿಗೆ ಆಯವ್ಯಯದಲ್ಲಿ ಒದಗಿಸಿರುವ ಹಣದ ವಿವರ ಕೆಳಗಿನಂತಿರುತ್ತದೆ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ ಯೋಜನೆಗಳು	ರಾಜ್ಯ ಯೋಜನೆ					
		1995-96			1996-97		
		ನಿಗದಿಪಡಿಸಿದ ಹಣ	ಬಿಡುಗಡೆಯಾದ ಹಣ	ಖರ್ಚಾದ ಹಣ	ನಿಗದಿಪಡಿಸಿದ ಹಣ	ಬಿಡುಗಡೆಯಾದ ಹಣ	ಖರ್ಚಾದ ಹಣ
1)	ಸಿಬ್ಬಂದಿ ವೆಚ್ಚ	45.00	45.00	45.00	60.00	60.00	60.00
2)	ಕೊಳಚೆ ಪ್ರದೇಶ ಸುಧಾರಣೆ (ವಿಶೇಷ ಘಟಕ ಯೋಜನೆ)	350.00	325.00	325.00	360.00	360.00	360.00
3)	ಇತರೆ ಕೊಳಚೆ ಪ್ರದೇಶ (ಸುಧಾರಣೆ ಕಾರ್ಯಕ್ರಮ)	30.00	30.00	30.00	35.00	35.00	35.00
4)	ಆರ್ಥಿಕ ಹಿಂದುಳಿದ ಮನೆಗಳು (ವಿಶೇಷ ಘಟಕ ಯೋಜನೆ)	294.00	269.00	269.00	325.00	325.00	325.00
5)	ಆರ್ಥಿಕ ದುರ್ಬಲ ವರ್ಗದ ಮನೆಗಳು	28.00	28.00	28.00	35.00	35.00	35.00
6)	ನಿವೇಶನಗಳು ಮತ್ತು ಸೇವೆಗಳು	10.00	10.00	10.00	20.00	20.00	20.00
7)	ತರಭೇತಿ ಮತ್ತು ಗಣಕೀಕರಣ	2.00	2.00	2.00	5.00	5.00	5.00
8)	ಹುಡ್ಕೋ ಸಾಲದ ಮರುಪಾವತಿ	-	-	-	160.00	160.00	160.00
		709.00	709.00	709.00	1000.00	1000.00	1000.00
9)	ಯೋಜನೇತರ ಸಿಬ್ಬಂದಿ ವೆಚ್ಚ	125.00	125.00	125.00	137.50	137.48	137.48